

# ಹಂಪಿ ಯಾನ!



■ ರಶ್ಮಿ ಎಸ್.
ಚಿತ್ರಗಳು: ವಿಶ್ವನಾಥ ಸುವರ್ಣ

'ಹಾಳು ಹಂಪಿ' ಅಂತ ಯಾರವರು ಕರೆದವರು! ಇಲ್ಲಿ ನೋಡಿದರೆ, ಸೂರ್ಯೋದಯ, ಸೂರ್ಯಾಸ್ತದ ಸಮಯದಲ್ಲಿ ಹೊಂಬಣ್ಣದಲ್ಲಿ ಮಿಂದೇಳುವ ಹಂಪಿಯ ಸೊಗಡನ್ನು ಬಣ್ಣಿಸುವುದೇ ಬಲುಕಷ್ಟ!

ನೆತ್ತಿಯ ಮೇಲೆ ಸುಡುವ ಉರಿಬಿಸಿಲು. ಹಂಪಿಯ ಮಂಟಪ, ದೇವಳಗಳಲ್ಲಿ ಕಾಲಿಟ್ಟರೆ, ತಣ್ಣನೆ ಸುಳಿಯುವ ಗಾಳಿ. ಇಂಥ ಬಯಲು ಪ್ರದೇಶದಲ್ಲಿಯೂ ರಾಣಿಯರಿಗಾಗಿ ಮಾತ್ರ ವಾತಾನುಕೂಲಿತ ವ್ಯವಸ್ಥೆ. ಲೋಟಸ್ ಮಹಲ್‌ನಲ್ಲಿ ಅಲ್ಲಿ ಇಲ್ಲಿ ಸುಳಿದಾಡಿದ ಗಾಳಿ ಸುಕೋಮಲೆ ರಾಣಿಯರನ್ನು ಸೋಕುವಾಗ ಮಾತ್ರ ತಣ್ಣಗೆ ಕೊರೆಯುವ ವ್ಯವಸ್ಥೆ!

ಕೈ ಅಗಲಿಸಿಕೊಂಡು ಸ್ನಾನ ಮಾಡುವಷ್ಟು ದೊಡ್ಡ ಸ್ನಾನದ ಮನೆಗಳೀಗ ಅಪರೂಪ. ಆದರೆ ಇಲ್ಲಿ ಸ್ನಾನದ ವೈಭವ, ವೈಭೋಗವೇ ಬೇರೆ. ಜಲಕ್ರೀಡೆಯಷ್ಟೇ ಅಲ್ಲ, ಜಲವಿಹಾರದಷ್ಟು ಉದ್ದಗಲದ ಸ್ನಾನದ ಮನೆ ನೋಡಿ... ಒಂದರೆ ಕ್ಷಣ ಕಣ್ಮುಚ್ಚಿ ಆ ಕಾಲಕ್ಕೆ ಹೋಗುವಂತೆ ಮಾಡುತ್ತದೆ.

(40ನೇ ಪುಟ ನೋಡಿ)